MYSORE LEGISLATIVE ASSEMBLY

Wednesday, 2nd February 1966.

The House met in the Assembly Chamber, Vidhana Soudha, Bangalore, at one of the Clock.

MR. SPEAKER (SRI VAIKUNTA BALIGA (B.A., B.L.,) in the Chair.

(STARRED QUESTIONS)

(to which oral answers were given)

Bus permit for the Ganapathi High School Committee.

*Q.—17. SRI K. LAKKAPPA (Hebbur).—

Will the Government be pleased to state:—

(*a*) whether it is a fact that a bus permit has been issued to run a bus in the name of "Ganapathi High School Committee", Hebbur in Tumku Taluk;

(*b*) if so, whether the usufruct of the income derived by the bus called "Ganapathi High School Service" is being utilised for the betterment of the High School and the hostel;

(*c*) what is the income derived from that Ganapathi High School bus service that has been utilised for the Ganapathi High School, Hebbur;

(*d*) whether any account is maintained by the Committee;

(*e*) whether there is any hostel in existence to the students attached to the High School;

(*f*) if so, the income derived from that bus service utilised for the benefit of the students of the hostel (detailed strength of the students in the hostel may be furnished);

(*g*) whether they are aware that number of complaints have been lodged by the public regarding the misuse of the bus funds by the present Managing Committee, *i.e.*, its President and Secretary?

A.—SRI S. R. KANTHI (Minister for Education).—

(*a*) Yes.

(*b*) No.

(*c*) Does not arise in view of the reply to (*b*) above.

(SRI S. R. KANTHI)

(*d*) Yes.

(*e*) No.

(*f*) Does not arise in view of reply to clause (*e*) above.

(*g*) Yes.

ಶ್ರೀ ಕೆ. ಲಕ್ಕಪ್ಪ.—ಗಣಪತಿ ಪ್ರಾಥಶಾಲಾ ಕಮಿಟಿಯವರು ಬಸ್ ಸರ್ವಿಸ್ ಯಾವ ವರ್ಷದಿಂದ ಪ್ರಾರಂಭ ಮಾಡಿದರು ? ಈ ಕಮಿಟಿ ರಿಜಿಸ್ಟರ್ ಆಗಿದೆಯೇ ?

†ಶ್ರೀ ಎಸ್. ಆರ್. ಕಂಠಿ.—ಏನು ಆಗಿದೆ ಎಂದರೆ, ಅವರು ಗಣಪತಿ ಹಾಸ್ಟಲ್ ಕಮಿಟಿ ಎಂದು ಒಂದು ಕಮಿಟಿ ಮಾಡಿಕೊಂಡಿದ್ದಾರೆ, ಅವರಿಗೆ ಈ ಬಸ್ ಸರ್ವಿಸ್ ಕೊಟ್ಟಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಅದು ರಿಜಿಸ್ಟರ್ ಆಗಿದೆಯೇ ?

ಶ್ರೀ ಎಸ್ ಆರ್. ಕಂಠಿ.—ಸರ್ಕಾರದ ಇನ್‌ಫರ್ಮೇಷನ್ ಪ್ರಕಾರ ಅದು ರಿಜಿಸ್ಟರ್ ಆಗಿದೆ ಎಂದು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಯಾವ ಉದ್ದೇಶಕ್ಕೋಸ್ಕರ ಈ ಬಸ್‌ನ್ನು ಕೊಟ್ಟರು ? ಹಾಸ್ಟಲ್ ವಿದ್ಯಾರ್ಥಿಗಳಿಗೆ ಗೋಸ್ಕರವೇ ? ಅದರಿಂದ ಬಂದಂಥ ಆದಾಯವನ್ನು ಹಾಸ್ಟಲ್ಲಿಗೆ ಉಪಯೋಗ ಮಾಡಿದ್ದಾರೆಯೇ ? ಹಾಸ್ಟಲ್‌ನಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? 1958ನೇ ಇಸವಿಯಿಂದಲೂ ಹಾಸ್ಟಲು ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಸ್ಟರ್ ಇಲ್ಲ ಎಂದು ತಿಳಿದು ಬಂದಿದೆ, ಆದ್ದರಿಂದ ಬಸ್ಸಿನಿಂದ ಬಂದ ಉತ್ಪನ್ನವನ್ನು ಹಾಸ್ಟೆಲ್ಲಿಗೆ ಖರ್ಚು ಮಾಡಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಬಸ್ಸಿನಿಂದ ಬಂದಂಥ ಉತ್ಪತ್ತಿಯನ್ನು ಖರ್ಚು ಮಾಡಿಲ್ಲ ಎಂದು ಸುಳ್ಳರ ಕೊಡುತ್ತಿದ್ದಾರೆ. ಬಸನ್ನು ಹೈಕೋರ್ಟಾ ಹೆಸರಿಗೆ ಕೊಟ್ಟಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಬಸ್ಸಿನಿಂದ ಬಂದಂಥ ಉತ್ಪತ್ತಿಯನ್ನು ಹಾಸ್ಟೆಲ್‌ಗೆ ಖರ್ಚು ಮಾಡಿಲ್ಲ ಎಂದು ಹೇಳಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಬಸ್ಸಿನಿಂದ ಬಂದಂಥ ಉತ್ಪತ್ತಿಯನ್ನು ಯಾವ ಉದ್ದೇಶಕ್ಕೋಸ್ಕರ ಖರ್ಚು ಮಾಡಬೇಕೆಂದು ಸಮಿತಿಯವರು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಹಾಸ್ಟಲ್ಲಿಗೆ ಖರ್ಚು ಮಾಡುವ ಪ್ರಶ್ನೆ ಬರುವುದಿಲ್ಲ, ಬಂದಂಥ ಉತ್ಪತ್ತಿಯನ್ನು ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಅದು ಅಲ್ಲಿದ್ದೇ ಇದೆ.

ಶ್ರೀ ಕೆ. ಲಕ್ಕಪ್ಪ.—ಬಸ್‌ನಿಂದ ಬಂದಂಥ ಉತ್ಪತ್ತಿ ಎಷ್ಟು ಪೋಸ್ಟ್ ಆಫೀಸಿನಲ್ಲಿದೆ?

Sri S R. KANTHI.—The income deposited in Savings Bank of the Post Office as on 12th April 1965 is Rs 7,155—00.

ಶ್ರೀ ಕೆ. ಲಕ್ಕಪ್ಪ.—ಈ ಬಸ್ಸಿನಿಂದ ಆದಾಯ 200-300 ರೂಪಾಯಿ ಇದ್ದು ಅದರ ಆದಾಯವನ್ನು ಸಕ್ರೆಟರಿ ಮತ್ತು ಅಧ್ಯಕ್ಷರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ಎಷ್ಟೋ ಸಾರಿ ತಮಗೆ ಅರ್ಜಿ ಬಂದಿದೆ, ಈ ಸಭೆಯಲ್ಲಿ ಎಷ್ಟೋ ಸಾರಿ ಹೇಳಿದ್ದೇವೆ.

ಶ್ರೀ ಎಸ್. ಆರ್. ಕಂಠಿ.—ಅರ್ಜಿ ಬಂದಿದೆ ಮತ್ತು ಸಭೆಯಲ್ಲಿಯೂ ಹೇಳಿದ್ದೀರಿ. ಅದಕ್ಕಾಗಿ ಸರ್ಕಾರದವರು ತನಿಖೆ ಮಾಡುತ್ತಿದ್ದಾರೆ. 200—300 ರೂಪಾಯಿ ಉತ್ಪನ್ನ ಇದೆ ಎಂದು ಹೇಳುತ್ತೀರಿ. ಅಷ್ಟು ಇಲ್ಲ. ಮ್ಯಾನೇಜ್‌ಮೆಂಟ್ ಪ್ರಕಾರ ಮ್ಯಾನೇಜ್‌ಮೆಂಟಿಗೆ ಕೊಡುವ 5 ಪರ್ಸೆಂಟ್, ಡ್ರೈವರ್ 6 ರೂಪಾಯಿನಂತೆ 5 ವರ್ಷ ಆವರ್ತಿತ ಖರ್ಚು ಈ ಹಣದಲ್ಲಿ ಸೇರಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ —ಮಿನಿಯೂಸ್ ಆಗಿದೆಯೆಂದು ಎಷ್ಟು ದಿವಸದಿಂದ ಕಂಪ್ಲೇಂಟ್ ಬಂದಿದೆ, ಸದ್ಯ ತೀರ್ಮಾನವಾಗಿದೆ ?

ಶ್ರೀ ಎಸ್. ಆರ್. ಕಂಠಿ.—ಈಗ ತನಿಖೆ ನಡೆಯುತ್ತಿದೆ. ಡಿ.ಇ.ಓ. ಅಲ್ಲಿಗೆ ಹೋಗಿ ಇನ್‌ವೆಸ್ಟಿಗೇಟ್ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಲಕ್ಕಪ್ಪ —ಸಾರ್ವಜನಿಕ ವಿದ್ಯಾರ್ಥಿನಿಲಯದ ಹೆಸರಿನಲ್ಲಿ ಬಸ್ ಪರ್ಮಿಟ್ ತೆಗೆದುಕೊಂಡು ಮೋಸ ಮಾಡಿ, ಹೀಗೆ ದುರುಪಯೋಗಪಡಿಸಿಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದ್ದಾಗ್ಯೂ ಕ್ರಮ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣ ಏನು ?

ಶ್ರೀ ಎಸ್. ಆರ್. ಕಂಠಿ.—ಇನ್ವೆಸ್ಟಿಗೇಶನ್ ನಡೆದಿದೆ,

ಶ್ರೀ ಕೆ. ಲಕ್ಕಪ್ಪ.—ಇವರು ಬಸ್ ಪರ್ಮಿಟ್‌ನ್ನು ಚೀಟ್ ಮಾಡಿ ಬಸ್ ಪರ್ಮಿಟ್ ತೆಗೆದು ಕೊಂಡಿದ್ದಾರೆ. Is it not cheating and fraud played by the secretary ?

Mr. SPEAKER.—Where is fraud and where is cheating ?

Sri K. LAKKAPPA.—They have utilised the amount not for the purpose for which it is meant.

Mr. SPEAKER.—They mentioned the object. Licence has been given and bus is being run commercially. We do not have the accounts. The member is saying it is cheating and is using strong language half a dozen times.

ಶ್ರೀ ಕೆ. ಲಕ್ಕಪ್ಪ.—ಬಸ್ ಪರ್ಮಿಟ್ ಯಾವ ಉದ್ದೇಶಕ್ಕೋಸ್ಕರ ಕೇಳಿದರು. ಬಸ್ ಪರ್ಮಿಟ್‌ನ್ನು ಯಾವ ಉದ್ದೇಶಕ್ಕೋಸ್ಕರ ಕೊಟ್ಟಿದಿರಿ ?

ಶ್ರೀ ಎಸ್. ಆರ್ ಕಂಠಿ —ಅವನ್ನು ಉತ್ತರದಲ್ಲಿ ಹೇಳಿದೆ.

ಶ್ರೀ ಬಿ. ಬೈರಪ್ಪಾಜಿ.—ಈ ಬಸ್ಸನ್ನು ಅವರು ರೈಸನ್ಸ್ ತೆಗೆದುಕೊಂಡು ಹೈಸ್ಕೂಲ್ ಹೆಸರಿನಲ್ಲಿ ಓಡಿಸಿ ತ್ತಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಹೈಸ್ಕೂಲ್ ಹೆಸರಿನಲ್ಲಿ ಅಲ್ಲ. ಹೈಸ್ಕೂಲ್ ಕಮಿಟಿ ಹೆಸರಿನಲ್ಲಿ ಇದೆ.

ಶ್ರೀ ಕೆ. ಲಕ್ಕಪ್ಪ.—ಹೈಸ್ಕೂಲ್ ಕಮಿಟಿ ಯಾವ ಉದ್ದೇಶಕ್ಕೋಸ್ಕರ ಬಸ್ಸನ್ನು ತೆಗೆದುಕೊಂಡು ನಡೆಸುತ್ತಿದ್ದಾರೋ ಅದು ಸಾರ್ಥಕ ಆಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ, ಹಾಸ್ಟಲ್‌ಗೆ ಉಪಯೋಗ ಮಾಡಿಲ್ಲ ಎಂದು. ಅದು ಎಂಪ್ಲಾಯ್ಮೆಂಟ್ ಆಫೀಸಿನಲ್ಲಿದೆ. ಏನು ಸಾಮಾನು ಚಿಲ್ಲರೆ ಇದೆ ಎಂದು ಹೇಳಿದ್ದೇನೆ

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸರ್ಕಾರದಿಂದ ಬಸ್‌ಲೈಸೆನ್ಸ್ ಸಿಕ್ಕಿದಮೇಲೆ ಹಾಸ್ಟರ್ ನಡೆಸಲಿಲ್ಲ. ಬಂದ ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇದರ ವಿಚಾರವಲ್ಲಿ ಏನ್‌ಕ್ವೈರಿ ಮಾಡಿ ಅಕ್ಷನ್ ತೆಗೆದ ಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದೀರಾ ? ಎಷ್ಟು ವರ್ಷದಿಂದ ಈ ದೂರು ಗಳು ಬರುತ್ತಾ ಇವೆ ? ವಿದ್ಯಾರ್ಥಿನಿಲಯದ ಹಣವನ್ನಲ್ಲಿ ಬಸ್ ಪರ್ಮಿಟ್ ತೆಗೆದುಕೊಂಡು ಬಸ್ ಹಣ ಸಂಪೂರ್ಣವಾಗಿ ದುರುಪಯೋಗವಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ತುಮಕೂರು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು ಇನ್‌ಸ್ಪೆಕ್ಷನ್ ಮಾಡುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—50-60 ಸಾವಿರ ರೂಪಾಯಿ ಹೋಗಿದೆ. ಬಸ್ ಪರ್ಮಿಟ್ ಕೊಟ್ಟಮೇಲೆ ಸಾರ್ವಜನಿಕರು ಗರಾಟೆ ಮಾಡಿದಮೇಲೆ, ಬಸ್ ಲೈಸನ್ಸನ್ನು ತಮ್ಮದೇ ಆದ ಹೆಸರಿಗೆ ವರ್ಗಾವಣೆಗೆ ಮಾಡುವುದಕ್ಕೆ ಅರ್ಜಿಯನ್ನು ಆರ್.ಟಿ.ಓ. ಆಫೀಸಿಗೆ ಕೊಟ್ಟರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ರೀತಿ ಕೊಳ್ಳಂಕಹ ಅರ್ಜಿಯನ್ನು ತಡೆಯುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಎಸ್. ಆರ್. ಕಂಠಿ.—ಆ ಇನ್‌ಫರ್ಮೇಷನ್ ನನ್ನ ಹತ್ತಿರ ಇಲ್ಲ.

Mr. SPEAKER.—It is for the R.T.O to decide.

ಶ್ರೀ ಕೆ. ಲಕ್ಕಪ್ಪ.—ಈ ಬಗೆ ಸಾರ್ವಜನಿಕರಿಂದ, ಆ ಹಂಕ್ಕೆಲಲ್ಲಿ ವಿದ್ಯಾರ್ಥಿಗಳು ಇಲ್ಲ; ಹೈಸ್ಕೂಲು ನಡೆಯುತ್ತಾ ಇಲ್ಲ, ಹುಡುಗರು ಮಾಸ್ಟರ ಹೊಡಿವಾರ್. ಉಪಾಧ್ಯಾಯರು ಹಣ ದುರುಪಯೋಗವಾಗಿದೆಯೆಂದು ನಮಗೆಲ್ಲಾ ಟೆಲಿಗ್ರಾಂ ಕಳಿಸಿದ್ದಾರೆ. ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತಗದ.ಕೊಳ್ಳುತ್ತೀರಿ ?

Sri S. R. KANTHI.—I have received a telegram on 31-1-1966 stating all that and that is under investigation.

Sri K. LAKKAPPA —Shall I pass it on through you ?

Mr. SPEAKER —The Chair is not going to be the Post Office.

Sri S. R. KANTHI.—I have already got the telegram.

ಶ್ರೀ ಬಿ. ಬೈರಪ್ಪಾಜಿ—ಗೃಹಪತಿ ಪ್ರೌಢಶಾಲೆಯ ಸದಸ್ಯರು ಮತ್ತು ಅಧ್ಯಕ್ಷರು ಸರ್ಕಾರದ ಮೇಲೆ ಪ್ರಭಾವ ಬೀರುವ ವ್ಯಕ್ತಿಗಳಾಗಿದ್ದುದರಿಂದ ಇಲಾಖೆಯ ಅಧಿಕಾರಿಗಳು ಯಾವ ವಿಧವಾದ ಕಾರ್ಯಕ್ರಮವನ್ನೂ ಅವರ ಮೇಲೆ ತೆಗೆದುಕೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರು ಯಾರೋ ನನಗೆ ಗೊತ್ತಿಲ್ಲ.

Employees of the Defunct District Boards.

*Q.—21. Sri H. R KESHAVA MURTHY (Gandasi).—

Will the Government be pleased to state :—

(a) the total number of the employees of the defunct District Boards of the old Mysore State working at present in the Taluk Development Boards and District Development Councils in the State ;

(b) how many of them have been absorbed in the Government Departments as per letter No. LLH 114 BSP 60, dated 13th November 1961 from the Secretary to Government of Mysore, Development and R. L. A Department, Bangalore, addressed to the Divisional Commissioner, Mysore Division, Mysore ;

(c) if absorbed, whether the seniority and other benefits have been given to them like that of the Government officials of the Department in which they have been absorbed ;

(d) if not, the reasons for the delay in finalising their seniority and giving other benefits ;

(e) the action taken by them regarding the officials who have not yet been absorbed ?

(f) whether they would take immediate action in helping the officials of the defunct District Boards who have not yet been absorbed in the Government Departments at least within the date of finalisation of seniority list of the Non-Gazetted Government servants of the State ?

A.—Sri R. M. PATIL (Minister for Development, Panchayathi Raj and Municipal Administration).—

(a) No. working in—

(i) Taluk Boards	...	269.
(ii) D. D. Councils	...	16.

(b) 48.

(c) Yes, as per orders issued in each case.

(d) Does not arise in view of reply to clause (c) above.

(e) The matter is under correspondence with the Departments concerned in which the employees are to be absorbed and would be finalised shortly.

(f) Does not arise in view of reply to clause (e) above.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಪ್ಪಿಮೆಂಟರಿ (ಎ)ಗೆ ಉತ್ತರವಾಗಿ 285 ಜನ ಈಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮತ್ತು ತಾಲ್ಲೂಕು ಬೋರ್ಡ್‌ನಲ್ಲಿ ಇದ್ದಾರೆ ಎಂದು ಹೇಳಿದ್ದೀರಿ. ಅವರನ್ನು ಇನ್ನು ಎಷ್ಟು ದಿವಸದಲ್ಲಿ ಸರ್ಕಾರದ ಕೆಲಸಗಳಿಗೆ ಅಬ್‌ಸಾರ್ಬ್ ಮಾಡುತ್ತೀರಿ ? ಮತ್ತು ಯಾವ ಯಾವ ಡಿಪಾರ್ಟ್‌ಮೆಂಟುಗಳಿಗೆ ಅಬ್‌ಸಾರ್ಬ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ?